ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 1, March-April 2026, Pp. 104-110
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹಸ್ತಪ್ರತಿಗಳ ಪ್ರಕಾರಗಳು ಮತ್ತು ಸಂರಕ್ಷಣೆ

**ಡಾ. ರೋಹಿಣಿ ಹಿರೇಶೆಡ್ಡಿ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪುರ

***Abstract:***

*ಹಸ್ತಪ್ರತಿಗಳು ಭಾರತದ ಪ್ರಾಚೀನ ಜ್ಞಾನ, ಸಾಹಿತ್ಯ, ಇತಿಹಾಸ, ಧರ್ಮ, ಸಂಸ್ಕೃತಿ ಮತ್ತು ಸಾಮಾಜಿಕ ಬದುಕಿನ ಅಮೂಲ್ಯ ದಾಖಲೆಗಳಾಗಿವೆ. ತಾಳೆಗರಿ, ಕಾಗದ, ಬಟ್ಟೆ, ತಾಮ್ರಪತ್ರ ಹಾಗೂ ಇತರ ಮಾಧ್ಯಮಗಳಲ್ಲಿ ಹಸ್ತಪ್ರತಿಗಳು ರಚಿಸಲ್ಪಟ್ಟಿದ್ದು, ಅವುಗಳ ಸ್ವರೂಪ ಮತ್ತು ಬಳಕೆಯಲ್ಲಿ ವೈವಿಧ್ಯ ಕಂಡುಬರುತ್ತದೆ. ಸಾಹಿತ್ಯಿಕ, ಧಾರ್ಮಿಕ, ಐತಿಹಾಸಿಕ, ವೈದ್ಯಕೀಯ, ವೈಜ್ಞಾನಿಕ ಮತ್ತು ಆಡಳಿತಾತ್ಮಕ ಹಸ್ತಪ್ರತಿಗಳು ಪ್ರಮುಖ ಪ್ರಕಾರಗಳಾಗಿವೆ. ಕಾಲಕ್ರಮೇಣ ತೇವಾಂಶ, ಉಷ್ಣತೆ, ಕೀಟಗಳು, ಧೂಳು, ಶಿಲೀಂಧ್ರ ಹಾಗೂ ಅಸಮರ್ಪಕ ನಿರ್ವಹಣೆಯಿಂದ ಹಸ್ತಪ್ರತಿಗಳು ಹಾನಿಗೊಳಗಾಗುವ ಸಾಧ್ಯತೆ ಇದೆ. ಆದ್ದರಿಂದ ವೈಜ್ಞಾನಿಕ ಸಂರಕ್ಷಣೆ, ಸೂಕ್ತ ಸಂಗ್ರಹಣೆ, ಡಿಜಿಟಲೀಕರಣ ಮತ್ತು ನಿಯಮಿತ ನಿರ್ವಹಣೆಯ ಮೂಲಕ ಅವುಗಳನ್ನು ಮುಂದಿನ ಪೀಳಿಗೆಗೆ ಉಳಿಸುವುದು ಅಗತ್ಯವಾಗಿದೆ. ಈ ಲೇಖನವು ಹಸ್ತಪ್ರತಿಗಳ ವಿವಿಧ ಪ್ರಕಾರಗಳು, ಅವುಗಳ ಮಹತ್ವ, ಸಂರಕ್ಷಣೆಯ ವಿಧಾನಗಳು ಹಾಗೂ ಆಧುನಿಕ ತಂತ್ರಜ್ಞಾನದ ಮೂಲಕ ಅವುಗಳ ಸಂರಕ್ಷಣೆಯ ಸಾಧ್ಯತೆಗಳನ್ನು ಅಧ್ಯಯನ ಮಾಡುತ್ತದೆ.*

***Keywords:*** *ಹಸ್ತಪ್ರತಿಗಳು, ತಾಳೆಗರಿ ಹಸ್ತಪ್ರತಿಗಳು, ಹಸ್ತಪ್ರತಿ ಸಂರಕ್ಷಣೆ, ಡಿಜಿಟಲೀಕರಣ, ಸಾಂಸ್ಕೃತಿಕ ಪರಂಪರೆ*

## ಪೀಠಿಕೆ

ಹಸ್ತಪ್ರತಿ ಅಥವಾ ಕೈಯಳತೆ ಎಂದರೆ ಮುದ್ರಿತವಲ್ಲದ ಹಾಗೂ ಇನ್ನಾವುದಾದರೂ ರೀತಿಯಲ್ಲಿ ನಕಲಾದದ್ದು. ಒಬ್ಬರಿಂದ ಅಥವಾ ಕೆಲವು ಜನರಿಂದ ಕೈಯ್ಯಾರೆ ಸೃಷ್ಟಿಸಲ್ಪಟ್ಟದ್ದು. ಕೈಬರಹದಲ್ಲಿ ಬರೆದ ಪತ್ರಗಳಂತಹ ವಿಷಯಗಳ ದಾಖಲಾತಿ ಹೊಂದಿರುವಂತಹ ಪತ್ರ. ಬರವಣಿಗೆಯಲ್ಲದೆ ಕೈಗಳನ್ನು ಬಳಸಿ ವಿಷಯಗಳನ್ನು ದಾಖಲಿಸುವಂತಹ ಇತರ ವಿಧಾನಗಳಿಗೂ ಈ ಪದವನ್ನು ಬಳಸಬಹುದು. ಉದಾಹರಣೆಗೆ ಗಟ್ಟಿಯಾದ ವಸ್ತುಗಳ ಮೇಲೆ ಉಳಿಯಿಂದ ಮಾಡಿದ ಕೆತ್ತನೆಗಳು ಅಥವಾ ಪ್ಲಾಸ್ಟರ್ ಮೇಲೆ ಚಾಕುವಿನಂತಹ ಚೂಪಾದ ತುದಿಯಿಂದ ಕೆರೆಯಲ್ಪಟ್ಟಂತಹವು ಅಥವಾ ಒಂದು ಶಲಾಕೆಯನ್ನು ಬಳಸಿ ಮೇಣದ ಸಣ್ಣ ತುಣುಕುಗಳ ಮೇಲೆ ಕೆತ್ತನೆ ಮಾಡುವುದು. ಅಥವಾ ಚೂಪಾದ ತಿಲಕಾಷ್ಟದಿಂದ ಒತ್ತಿ ಸಮತಟ್ಟಾದ ಸಣ್ಣ ಹಲಗೆಗಳ ಅಥವಾ ಸುಟ್ಟಿರದ ಮಣ್ಣಿನ ಮೇಲೆ ಬರೆಯಲ್ಪಟ್ಟ ಬೆಣ್ಣೆಯಾಕಾರದ ಬರವಣಿಗೆಗಳನ್ನು ಸಹ ಹಸ್ತಪ್ರತಿಯೆಂದು ಕರೆಯುತ್ತಾರೆ. ಭಾರತದಲ್ಲಿ ತಾಳೆಗರಿ ಹಸ್ತಪ್ರತಿಗಳು ವಿಶಿಷ್ಟವಾದ ಆಯತಾಕಾರದ ಉದ್ದನೆಯ ಆಕಾರವನ್ನು ಹೊಂದಿದ್ದು, ಪ್ರಾಚೀನ ಕಾಲದಿಂದ 19ನೆಯ ಶತಮಾನದವರೆಗೂ ಬಳಕೆಯಲ್ಲಿದ್ದವು. ಇಂಗ್ಲಿಷ್‌ನಲ್ಲಿ Manuscript ಎಂದು ಕರೆಯುತ್ತಾರೆ. ಇದು ಲ್ಯಾಟಿನ್ ಭಾಷೆಯ 'manus' (ಕೈ) ಹಾಗೂ 'scriptum'

***Please cite this article as:*** ರೋಹಿಣಿ ಹಿರೇಶೆಡ್ಡಿ. (2026). ಹಸ್ತಪ್ರತಿಗಳ ಪ್ರಕಾರಗಳು ಮತ್ತು ಸಂರಕ್ಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 104–110

(ಬರೆಯಲ್ಪಟ್ಟದ್ದು) ಈ ಸಂಯುಕ್ತ ಪದಗಳಿಂದ ಕೂಡಿದೆ.

ಈ ಹಸ್ತಪ್ರತಿಯಲ್ಲಿ ಕವಿ ನಿರ್ಮಿತ 'ಕೃತಿ', ಲಿಪಿಕಾರನಿರ್ಮಿತ 'ಪ್ರತಿ' ಎಂದು ಎರಡು ಘಟಕಗಳಿವೆ. ಕವಿಯ ಮೂಲನಿರ್ಮಿತಿಯನ್ನು 'ಕೃತಿ'ಯೆಂದು, ಕಾಲಕ್ರಮದಲ್ಲಿ ಲಿಪಿಕಾರನ ನಿರ್ಮಿತಿಗಳನ್ನು 'ಪ್ರತಿ'ಯೆಂದು ಕರೆಯುತ್ತಾರೆ. ಇವುಗಳಲ್ಲಿ ಕೃತಿ ಎನ್ನುವುದು ಸೃಷ್ಟಿಯಾದರೆ, ಪ್ರತಿ ಎನ್ನುವುದು ಉತ್ಪಾದನೆಯಾಗಿರುತ್ತದೆ. ಈ ಪ್ರತಿಗಳನ್ನು ಒಂದು ನಿಯಮ ಬದ್ದವಾಗಿ ಹೊಂದಿಸಿ ಅವುಗಳನ್ನು ಕಟ್ಟಿನಲ್ಲಿ ರಕ್ಷಿಸಿಡಲಾಗುತ್ತಿತ್ತು. ಈ ಕಟ್ಟಿನಲ್ಲಿ ಒಂದು ಪ್ರತಿ ಅಥವಾ ಒಂದಕ್ಕಿಂತ ಹೆಚ್ಚು ಪ್ರತಿಗಳಿರಬಹುದು. ಆದ್ದರಿಂದ ಕೃತಿ ಬೇರೆ, ಪ್ರತಿ ಬೇರೆ, ಕಟ್ಟು ಬೇರೆ ಎಂದು ತಿಳಿಯಬೇಕು.

ಹಸ್ತಪ್ರತಿಗಳು ಸಾಮಾನ್ಯವಾಗಿ ಸಾಹಿತ್ಯ, ಸಮಾಜ, ಭಾಷೆ, ಇತಿಹಾಸ, ಧರ್ಮ, ನಂಬಿಕೆ, ಆಚರಣೆಗಳು, ಆಚಾರ–ವಿಚಾರ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ವೈದ್ಯ–ವೇದ, ಲೌಕಿಕಶಾಸ್ತ್ರ ಹೀಗೆ ಅನೇಕ ಅಂಶಗಳನ್ನು ಒಳಗೊಂಡಿರುತ್ತವೆ. ಹಸ್ತಪ್ರತಿಗಳು ನಾಡಿನ ಸಾಂಸ್ಕೃತಿಕ ಪ್ರತೀಕಗಳು. ಲೌಕಿಕ–ಆಗಮಿಕ, ಶಾಸ್ತ್ರ–ಕಾವ್ಯ ಈ ಮೊದಲಾದ ರೂಪದಲ್ಲಿ ದೊರೆಯುವ ಹಸ್ತಪ್ರತಿಗಳು ನಮ್ಮ ಪ್ರಾಚೀನ ಕನ್ನಡಿಗರ ಜ್ಞಾನಸಾಮಗ್ರಿಯ ದ್ಯೋತಕಗಳಾಗಿವೆ. ಇವುಗಳಲ್ಲಿ ತಾಳೆಗರಿ, ಕಾಗದಪ್ರತಿ, ಭೂರ್ಜಪತ್ರ, ಜಲಪತ್ರಗಳು ಅತೀ ಮುಖ್ಯವೆನಿಸುತ್ತವೆ.

**ಹಸ್ತಪ್ರತಿಯ ಪ್ರಕಾರಗಳು**

ಹಸ್ತಪ್ರತಿಗಳನ್ನು ಕೆಲವು ಗುಂಪುಗಳನ್ನಾಗಿ ವಿಂಗಡಿಸುವುದು ರೂಢಿಗೆ ಬಂದಿದೆ. ಅದರಂತೆ ಪ್ರತಿಕಾರರಾರು ಎಂಬ ಅಂಶದ ಮೇಲೆ ಇದರ ನಿರ್ಣಯವಾಗುತ್ತದೆ.

**ಡಿ. ಎಲ್. ನರಸಿಂಹಚಾರ್ಯರು –**

1. ಕವಿಯ ಸ್ವಹಸ್ತಾಕ್ಷರ ಪ್ರತಿ.
2. ಏಕೈಕ ಹಸ್ತಪ್ರತಿ.
3. ಮಾತೃಕೆ
4. ಪರಂಪರಾಗತ ಹಸ್ತಪ್ರತಿಗಳು.
5. ಮಿಶ್ರಪ್ರತಿಗಳು ಎಂದು ಐದು ವಿಭಾಗ ಮಾಡಿದ್ದಾರೆ.

**ಎಂ.ಎಂ.ಕಲಬುರ್ಗಿ** ಅವರು –

1. ಮೂಲಪ್ರತಿ
2. ಪರಂಪರಾಗತ ಪ್ರತಿ
   a) ಶುದ್ಧ ಸಂತಾನ ಪ್ರತಿ
   b) ಅಶುದ್ಧ ಸಂತಾನ ಪ್ರತಿ
3. ಏಕೈಕ ಹಸ್ತಪ್ರತಿ
4. ಸಂರಕ್ಷಿತ ಹಸ್ತಪ್ರತಿ ಎಂದು ವಿಭಾಗಿಸಿದ್ದಾರೆ.

ಹಾಗೆಯೇ **ಸೀತಾರಾಮ ಜಾಗೀರ್‌ದಾರರು–**

1. ಸ್ವಹಸ್ತಾಕ್ಷರ ಪ್ರತಿ.
2. ಏಕೈಕ ಹಸ್ತಪ್ರತಿ.
3. ಪರಂಪರಾಗತ ಹಸ್ತಪ್ರತಿ.
4. ಸಂರಕ್ಷಿತ ಹಸ್ತಪ್ರತಿ.
5. ಮಿಶ್ರ ಹಸ್ತಪ್ರತಿ ಎಂದು ವಿಂಗಡಿಸಿದ್ದಾರೆ.

ಇವುಗಳಲ್ಲಿ ಡಿ.ಎಲ್.ಎನ್. ಮತ್ತು ಜಾಗೀರ್‌ದಾರರು ಐದು ವಿಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ, ಕಲಬುರ್ಗಿಯವರು ನಾಲ್ಕು ಭಾಗಗಳನ್ನಾಗಿ ಮಾಡಿ ಒಂದರಲ್ಲಿ ಎರಡು ಉಪವಿಭಾಗಗಳನ್ನು ಗುರುತಿಸಿದ್ದಾರೆ. ಕವಿಯ ಸ್ವಹಸ್ತಾಕ್ಷರ ಪ್ರತಿ ಅಥವಾ ಮೂಲಪ್ರತಿ, ಏಕೈಕ ಹಸ್ತಪ್ರತಿ, ಪರಂಪರಾಗತ ಹಸ್ತಪ್ರತಿ ಎಂಬ ಮೂರು ವಿಧಗಳು ಮೂರರಲ್ಲಿಯೂ ಕಂಡುಬರುತ್ತವೆ. ಉಳಿದಂತೆ ಡಿ.ಎಲ್.ಎನ್. ಅವರ ಮಾತೃಕೆ ಎಂಬುದೂ, ಕಲಬುರ್ಗಿ ಅವರ ಪರಂಪರಾಗತ ಹಸ್ತಪತ್ರಿಯಲ್ಲಿನ ಶುದ್ಧ ಸಂತಾನ, ಅಶುದ್ಧ ಸಂತಾನ ಎಂದು ಬೇರೆಯಾಗಿಯೂ, ಸಂರಕ್ಷಿತ ಎಂಬುದು ಕಲಬುರ್ಗಿ ಮತ್ತು ಜಾಗೀರ್‌ದಾರರಿಬ್ಬರಲ್ಲಿಯೂ ಮಿಶ್ರಹಸ್ತಪ್ರತಿ ಎಂಬುದು ಡಿ.ಎಲ್.ಎನ್. ಮತ್ತು ಜಾಗೀರಾರರಿಬ್ಬರಲ್ಲಿಯೂ ಕಂಡುಬರುತ್ತದೆ. ಸಂರಕ್ಷಿತ ಪ್ರತಿಯನ್ನು ಡಿ.ಎಲ್.ಎನ್. ಅವರು ಮಿಶ್ರಪ್ರತಿ

ವಿಭಾಗದಲ್ಲಿಯೇ ಗುರುತಿಸಿದ್ದಾರೆ. ಇವುಗಳನ್ನು ಕೆಳಕಂಡಂತೆ ಪಟ್ಟಿಮಾಡಿ ತೋರಿಸಬಹುದು.

1. ಡಿ.ಎಲ್.ಎನ್. ಸ್ವಹಸ್ತಾಕ್ಷರ ಏಕೈಕ ಮಾತೃಕೆ ಪರಂಪರಾಗತ ಮಿಶ್ರ – (ಸಂರಕ್ಷಿತ)
2. ಕಲಬುರ್ಗಿ ಮೂಲಪ್ರತಿ ಏಕೈಕ – ಪರಂಪರಾಗತ ಸಂರಕ್ಷಿತ

a. ಶುದ್ಧ ಸಂತಾನ

b. ಅಶುದ್ಧ ಸಂತಾನ

3. ಜಾಗೀರ್‌ದಾರ್ ಸ್ವಹಸ್ತಾಕ್ಷರ ಏಕೈಕ – ಪರಂಪರಾಗತ ಮಿಶ್ರ ಸಂರಕ್ಷಿತ.

### 1. ಸ್ವಹಸ್ತಾಕ್ಷರ ಪ್ರತಿ ಅಥವಾ ಮೂಲಪ್ರತಿ

18ನೇ ಶತಮಾನದ ಕೊನೆಯಲ್ಲಿದ್ದ ಬಸವಪ್ಪಶಾಸ್ತ್ರಿ, ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ) ಇವರ ಮತ್ತು ಅವರಿಗಿಂತ ಈಚೀನವರ ಸ್ವಹಸ್ತಪ್ರತಿಗಳು ದೊರೆಯುತ್ತವೆಯೇ ಹೊರತು, ಇದಕ್ಕೆ ಹಿಂದಿನವು ಇದುವರೆಗೆ ದೊರೆತಿಲ್ಲ. ಇಂತಹವುಗಳು ದೊರೆತಾಗ ಮಾತ್ರ ಪ್ರತಿಗಳು ಸುಸ್ಥಿತಿಯಲ್ಲಿದ್ದ ಯಾವ ಎಡರು ತೊಡರುಗಳೂ ಇಲ್ಲದೆ ಸಂಪಾದಿಸಿ ಪ್ರಕಟಿಸಬಹುದು. ಬೇರೆ ಹಸ್ತಪ್ರತಿಗಳ ಅವಶ್ಯಕತೆಯೇ ಉಂಟಾಗುವುದಿಲ್ಲ. ತಾಮ್ರ ಮತ್ತು ಶಿಲೆಯ ಮೇಲಿರುವ ಸಾಹಿತ್ಯವನ್ನೂ ಸ್ವಹಸ್ತಾಕ್ಷರ ಪ್ರತಿಗಳೆಂದು ಕರೆಯಬಹುದೆಂದು ಹೇಳುತ್ತಾರೆ. ಏಕೆಂದರೆ ಕವಿ ರಚಿಸಿಕೊಟ್ಟು ಸಾಹಿತ್ಯವನ್ನು ತಾಮ್ರ ಅಥವಾ ಶಿಲೆಯ ಮೇಲೆ ಕಂಡರಿಸಿದ ಮೇಲೆ ರಚಕನು ಮತ್ತೊಮ್ಮೆ ಅದನ್ನು ನೋಡುತ್ತಿದ್ದನೆಂಬ ಊಹೆಯೇ ಕಾರಣವಾಗಿದೆ. ಆದರೆ ಇದರಲ್ಲಿಯೂ ಸಮಯಭಾವದಿಂದ ಕವಿ ನೋಡದಿರಲೂಬಹುದೆಂಬ ಶಂಕೆ ಇದಕ್ಕೆ ತೊಡಕಾಗಿದೆ. ಆದರೂ ಇವು ಪ್ರತಿ ಮರುಪ್ರತಿಗಳಾಗುವುದು. ತುಂಬಾ ವಿರಳವಾದುದರಿಂದ ಇವುಗಳನ್ನು ಈ ಗುಂಪಿನಲ್ಲಿ ಪರಿಭಾವಿಸಹುದೆಂದು ಹೇಳಬಹುದು ಬೊಪ್ಪಣ ಪಂಡಿತನ (ಕ್ರಿ.ಶ.ಸು1180) ಕೃತಿ “ಗೊಮ್ಮಟಜನ ಸುತ್ತಿ”ಯನ್ನು ಕವಿಯ ಸ್ವಹಸ್ತಪ್ರತಿ ಅಥವಾ ಮೂಲಪ್ರತಿ ಎಂದು ಹೇಳಬಹುದು.

### 2. ಏಕೈಕ ಹಸ್ತಪ್ರತಿ

ನಾಗವರ್ಮನ ‘ಕರ್ಣಾಟಕಕಾದಂಬರಿ’, ಚೌಂಡರಸನ ‘ನಳಚಂಪು’, 2ನೇಯ ನಾಗವರ್ಮನ ‘ವರ್ಧಮಾನ ಪುರಾಣ’, ಬಂಧುವರ್ಮನ ‘ಹರೊವಂಶಾಭ್ಯುದಯ’ ಮೊದಲಾದ ಗ್ರಂಥಗಳ ಒಂದೊಂದೇ ಪ್ರತಿಗಳು ದೊರೆತು ಸಂಪಾದನಾಕಾರ್ಯ ಬಹುತೊಡಕಾಗಿ ಪರಿಣಮಿಸಿರುವುದು ಕಂಡು ಬರುತ್ತದೆ. ಈ ಹಸ್ತಪ್ರತಿಗಳು ಅಶುದ್ಧವಾಗಿದ್ದರೆ, ಪ್ರಟಿತವಾಗಿದ್ದರೆ ಅವುಗಳನ್ನು ತಿದ್ದುವುದು ಅಥವಾ ತುಂಬುವುದು ತುಂಬಾ ತ್ರಾಸದಾಯಕ. ‘ಕರ್ಣಾಟಕಕಾದಂಬರಿ’ ಗ್ರಂಥದಲ್ಲಿ ತ್ರುಟಿತ ಭಾಗಗಳನ್ನು ತುಂಬಿ ಸರಿಪಡಿಸಲು ಸಂಪಾದಕರಾದ ಬಿ. ಮಲ್ಲಪ್ಪನವರು ಪಟ್ಟಶ್ರಮ ಶ್ಲಾಘನೀಯವಾದುದು. ಇದನ್ನು ಸಂಪಾದಿಸುವಾಗ ಮೂಲಗ್ರಂಥವಾದ ಬಾಣನ ‘ಕಾದಂಬರಿಯನ್ನು, ಸಂಸ್ಕೃತ ಪಂಡಿತರ ಸಹಾಯವನ್ನು ಪಡೆದು ಕಾರ್ಯನಿರ್ವಹಣೆ ಮಾಡಿದ್ದಾರೆ. ಏಕೆಂದರೆ ಇಂತಹ ಏಕೈಕ ಹಸ್ತಪ್ರತಿಗಳಲ್ಲಿ ದೊರೆತ ಗ್ರಂಥ ಶಾಶ್ವತವಾಗಿ ಉಳಿದಂತಾಗುವುದಲ್ಲದೆ ಮತ್ತು ತ್ರುಟಿತವಾಗಿ ಹಾಳಾಗುವುದನ್ನು ತಪ್ಪಿಸಬಹುದು. ಎಷ್ಟೇ ಕಷ್ಟಗಳು ಎದುರಾದರೂ ಸ್ವಚಿತ್ತಾಗಿ ಎಡವಿದರೂ ಇಂತಹ ಕೆಲಸವನ್ನು ಯಾರಾದರೂ ಮಾಡಿಯೇ ತೀರಬೇಕು. ಇದೇ ಉದ್ದೇಶದಿಂದ ಬಿ.ಎಸ್. ಸಂಗಯ್ಯನವರು ‘ಹರಿವಂಶಾಭ್ಯು’, ‘ವರ್ಧಮಾನ ಪುರಾಣ’ ಮೊದಲಾದ ಗ್ರಂಥಗಳ ಕಾರ್ಯವನ್ನು ನಿರ್ವಹಿಸಿದ್ದರೆ.

### 3. ಮಾತೃಕೆ

ಇದನ್ನು ಡಿ.ಎಲ್.ಎನ್. ಅವರು ಮಾತ್ರ ಗುರುತಿಸಿದ್ದಾರೆ. ಯಾವುದೇ ಗ್ರಂಥದ ಒಂದಕ್ಕಿಂತ ಹೆಚ್ಚು ಹಸ್ತಪ್ರತಿಗಳು ದೊರೆತಾಗ, ದೊರೆತ ಎಲ್ಲವೂ ಬೇರೆ– ಬೇರೆ ಮಾತೃಕೆಗಳ ನಕಲಾಗಿರಬಹುದು. ಇವೆಲ್ಲಕ್ಕೂ ಮೂಲವಾಗಿರಬಹುದಾದ ಹಸ್ತಪ್ರತಿಯನ್ನು

ಮಾತೃಕೆ ಎಂದು ಹೇಳಬಹುದು. 'ಕಖಗ' ಸಂಕೇತಗಳ ಮೂರು ಪ್ರತಿಗಳಿಗೆ 'ಯ' ಎಂಬ ಅಲಭ್ಯ ಪ್ರತಿ ಮಾತೃಕೆಯಾಗುತ್ತದೆ. 'ಖಗ'ಗಳಿಗೆ 'ಕ' ಪ್ರತಿ ಮೂಲವಾಗಿದ್ದಲ್ಲಿ 'ಕ' ಎಂಬುದನ್ನು ಲಬ್ಧ ಮಾತೃಕೆಯೆಂದೂ 'ಯ' ಎಂಬುದನ್ನು ಅಲಭ್ಯ ಮಾತೃಕೆಯೆಂದೂ ಹೇಳಲಾಗಿದೆ.

### 4. ಪರಂಪರಾಗತ ಹಸ್ತಪ್ರತಿಗಳು

ಯಾವುದೇ ಗ್ರಂಥದ ಹಸ್ತಪ್ರತಿಯಾಗಲಿ ಸ್ವಹಸ್ತಪ್ರತಿಯಾಗದಿದ್ದಲ್ಲಿ ಪರಂಪರಾಗತ ಪ್ರತಿಯಾಗುತ್ತದೆ. ಇಂತಹವು ಎಷ್ಟೇ ಪ್ರತಿಗಳು ದೊರೆತರೂ ಅವುಗಳೆಲ್ಲವೂ ಮೂಲದಿಂದ ಬಂದಿರುತ್ತವೆ. ಇವುಗಳಲ್ಲಿ ಪ್ರತಿ ಮಾಡಿದ ಕಾಲ, ಲಿಪಿಯ ವೈಶಿಷ್ಟ್ಯ, ಅಕ್ಷರ ಸ್ಖಾಲಿತ್ಯ ಮೊದಲಾದವುಗಳ ಆಧಾರದ ಮೇಲೆ ವಿಂಗಡಿಸಿ ಯಾವ ಯಾವ ಪೀಳಿಗೆಗೆ ಸೇರಿದುದೆಂಬುದನ್ನು ಗುರುತು ಮಾಡಬೇಕಾಗುತ್ತದೆ. ಡಿ.ಎಲ್.ಎನ್. ಅವರು ಒಬ್ಬನೇ ಕವಿ ಮತ್ತೊಂದು ಮಗದೊಮ್ಮೆ ತಿದ್ದಿ ಪಾಠಗಳನ್ನು ಬದಲಾಯಿಸಿದಾಗ (ಉದಾ:ಡಿ.ವಿ.ಜಿ.ಅವರ ಬೇಲೂರಿನ ಶಿಲಾಬಾಲಿಕೆಯರು) ಅವುಗಳ ಬೇರೆ-ಬೇರೆ ಪ್ರತಿಗಳನ್ನು ಇದೇ ಗುಂಪಿಗೆ ಸೇರಿಸಿದ್ದಾರೆ. ಕಲಬುರ್ಗಿ ಅವರು ಈ ಪ್ರತಿಗಳಲ್ಲಿ ಶುದ್ಧಸಂತಾನ, ಅಶುದ್ಧ ಸಂತಾನವೆಂಬ ಪ್ರಭೇದಗಳನ್ನು ಮಾಡಿದ್ದಾರೆ. ಒಂದು ಪೀಳಿಗೆಯ ಪರಂಪರಾಗತ ಪ್ರತಿ ಮೂಲಕ್ಕೆ ಪ್ರಾಮಾಣಿಕವಾಗಿದ್ದರೆ ಶುದ್ಧ ಸಂತಾನವೆಂದೂ, ಪೀಳಿಗೆ ಪರಂಪರೆ ಮೂಲಕ್ಕೆ ಪ್ರಾಮಾಣಿಕವಾಗಿದ್ದಲ್ಲಿ ಅಥವಾ ಒಂದು ಕೃತಿಯ ಪ್ರತಿ ಮಾಡಲು ಹಲವು ಲಿಪಿಕಾರರು ಕೂಡಿ ಬರೆಯುವುದು ಇಲ್ಲವೆ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನು ಉಪಯೋಗಿಸಿ ಒಂದು ಪ್ರತಿ ಮಾಡುವುದು. ಇವುಗಳನ್ನು ಶುದ್ಧ ಸಂತಾನ, ಅಶುದ್ಧ ಸಂತಾನ ಪ್ರತಿಗಳೆಂದು ಹೇಳಿದ್ದಾರೆ. ಅಲ್ಲದೆ ಶುದ್ಧ ಸಂತಾನ, ಅಶುದ್ಧ ಸಂತಾನ ಎರಡರಲ್ಲಿಯೂ ಮಾತೃಕಾ ಪ್ರತಿ, ಪುತ್ರಿಕಾ ಪ್ರತಿ, ಸೋದರ ಪ್ರತಿ, ಸದಸ್ಯ ಪ್ರತಿ ಎಂಬ ಒಳಭೇದಗಳನ್ನು ನೀಡುತ್ತಾರೆ.

### 5. ಮಿಶ್ರ ಪ್ರತಿಗಳು

ಈ ಐದನೆಯ ವಿಭಾಗದ ಹಸ್ತಪ್ರತಿಗಳನ್ನು ಡಿ.ಎಲ್.ಎನ್. ಮತ್ತು ಜಾಗೀರ್‌ದಾರರು ಗುರುತಿಸಿದ್ದರೆ, ಕಲಬುರ್ಗಿಯವರು ಬಿಟ್ಟಿದ್ದಾರೆ. ಕಲಬುರ್ಗಿಯವರು ಅಶುದ್ಧ ಸಂತಾನ ಎಂದು ಹೇಳಿರುವುದೇ ಮಿಶ್ರಪ್ರತಿಯಾಗಿ ಕಂಡುಬರುತ್ತದೆ. ಬೇರೆ-ಬೇರೆ ಪೀಳಿಗೆಯ ಎರಡು ಅಥವಾ ಹೆಚ್ಚು ಪ್ರತಿಗಳನ್ನು ಉಪಯೋಗಿಸಿ ಒಂದು ಪ್ರತಿಯನ್ನು ತಯಾರು ಮಾಡುವುದು ಅಥವಾ ಒಂದು ಪ್ರತಿಗೆ ಮತ್ತೊಂದು ಪ್ರತಿಯಿಂದ ದೊರೆತ ಬೇರೆ ಪಾಠಗಳನ್ನು ಗುರುತಿಸಿರುವುದು ಮಿಶ್ರಪ್ರತಿ ಯೆನ್ನಿಸಿಕೊಳ್ಳುವುದು. ಇಲ್ಲವೆ ಕೃತಿ ಸಾಕಷ್ಟು ವಿಸ್ತಾರವಾಗಿದ್ದು ಒಬ್ಬನಿಂದಲೇ ಬರೆಯಲು ಸಾಧ್ಯವಿಲ್ಲದಾದಾಗ ಬೇರೆ-ಬೇರೆ ಭಾಗಗಳನ್ನು ಬೇರೆ-ಬೇರೆ ಪ್ರತಿಕಾರರೂ ಲಿಖಿಸಿರುವುದು ಇದಕ್ಕೆ ಸೇರುತ್ತದೆ. 'ಇಂಥ ಪ್ರತಿಗಳನ್ನು ಬಹುಲಿಪಿಕಾರ ಪ್ರತಿಗಳೆಂದು ಕರೆದಿದೆ' ಎಂದು ಡಿ.ಎಲ್.ಎನ್ ಸೂಚಿಸುತ್ತಾರೆ. ಈ ಮಿಶ್ರಪ್ರತಿಗೆ ಉದಾರಣೆಯಾಗಿ "ಎರಡು ಮೂಲಪ್ರತಿಗಳನ್ನು ಯಿಟ್ಟುಕೊಂಡು ಸಮಗ್ರವಾಗಿ ಬರೆಯಲ್ಪಟ್ಟಿದೆ. ಕವಿಕುಂಜರ ಲೀಲಾವತಿ ಸಂಪೂರ್ಣಂ" ಮತ್ತು "ಕಟ್ಟಿಗೆ ಲಕ್ಷುಮಯ್ಯನವರ ಮನೆ ಪ್ರತಿ ಹೋಗಿ ಬಂದುಯಿದ್ದುದಕ್ಕೆ 2 ಪರ್ವವಂನುಚವಡಪ್ಪ ಬರದು ಶೇರಿಸಿಯಿರುವುದಕ್ಕೆ ನಿರ್ವಿಘ್ನ ಮಸ್ತು" 3 ಎಂಬುವುಗಳನ್ನು ಜಾಗೀರದಾರರು ನೀಡಿದ್ದಾರೆ. ಇದೇ ಲೀಲಾವತಿ ಗ್ರಂಥದ ಹಸ್ತಪ್ರತಿಯನ್ನು ಅಶುದ್ಧ ಸಂತಾನ ಪ್ರತಿಗೆ ಉದಾಹರಣೆಯಾಗಿ ಕಲಬುರ್ಗಿಯವರು ನೀಡಿದ್ದಾರೆ.

### 6. ಸಂರಕ್ಷಿತ ಹಸ್ತಪ್ರತಿ

ಡಿ.ಎಲ್.ಎನ್. ಅವರು ಇದನ್ನು ಒಂದು ಬೇರೆ ವಿಭಾಗದಲ್ಲಿ ವಿವರಿಸಿಲ್ಲವಾದರೂ ಮಿಶ್ರಪ್ರತಿ ವಿಭಾಗದಲ್ಲಿಯೇ ಇದನ್ನು ಸೂಚಿಸಿ, ಇದಕ್ಕೆ ಉದಾಹರಣೆಯಾಗಿ 'ವರ್ಜಿಲಕವಿಯ 'ಏನಾಡ್' ಎಂಬ ಮಹಾಕಾವ್ಯದ ಮತ್ತು ಅವನವೇ ಆದ ಇತರ ಕಾವ್ಯಗಳ ಹಸ್ತಪ್ರತಿಗಳು ಈ ತೆರನಾದವು- 'ಧವಲಾ',

ಎಂಬ ಮಹಾಗ್ರಂಥಗಳ ಅತಿಪ್ರಾಚೀನವೂ, ಅಧಿಕೃತವೂ ಆದ ಹಸ್ತಪ್ರತಿ ಮೂಡುಬಿದಿರೆಯ ಜೈನಭಂಡಾರದಲ್ಲಿದೆ. ಇದರ ಪ್ರತಿಗಳನ್ನು ಮಾಡಲು ಹಲವು ಶತಮಾನಗಳಿಂದ ಯಾರಿಗೂ ಅವಕಾಶವನ್ನು ಕೊಡಲಿಲ್ಲ. ಇದು ಮಠಾಧಿಪತಿಗಳಿಂದ ಒಂದು ರೀತಿಯಲ್ಲಿ ಸುರಕ್ಷಿತವಾಗಿರುವ 'ಕಲಬುರ್ಗಿ ಜಿಲ್ಲೆಯ ಕೊಡೆಕಲ್ಲ ಗ್ರಾಮದ ಬಸವೇಶ್ವರ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಹೊರತೆಗೆದು ಓದಲ್ಪಡುವ, ದೇವರಂತೆ ಗದ್ದುಗೆಯಲ್ಲಿ ಪೂಜೆಗೊಳ್ಳುತ್ತಿರುವ ಶರಣರ ವಚನ ಗ್ರಂಥಗಳಿವೆ. ಇವು ಸಂರಕ್ಷಿತ ಹಸ್ತಪ್ರತಿಗಳು. ಜಾಗೀರ್‌ದಾರರು ಡಿ.ಎಲ್.ಎನ್ ಅವರು ಹೇಳಿರುವ ಎರಡು ಗ್ರಂಥಗಳ ಜೊತೆಗೆ ಏಕನಾಥನೆಂಬುವನು 'ಜ್ಞಾನೇಶ್ವರಿ' ಗ್ರಂಥದ ಕೆಡಬಾರದೆಂದು ಪ್ರಯತ್ನಿಸಿ 1506ರಲ್ಲಿ ಹಲವು ಪ್ರತಿಗಳನ್ನು ಉಪಯೋಗಿಸಿ ಒಂದು ಶುದ್ಧ ಪ್ರತಿ ತಯಾರಿಸಿ ಏಕನಾಥ ಮಠದಲ್ಲಿ ಕಾಪಾಡಿರುವ ಪ್ರತಿಯನ್ನು ಸಂರಕ್ಷಿತ ಪ್ರತಿಯೆಂದು ಹೇಳಿದ್ದಾರೆ.

ಹೀಗೆ ಹಸ್ತಪ್ರತಿಗಳನ್ನು ಬೇರೆ-ಬೇರೆ ಹೆಸರುಗಳಿಂದ ವಿವಿಧ ಗುಂಪುಗಳನ್ನಾಗಿ ಮಾಡಿದರೂ ಕೆಲವು ಹಸ್ತಪ್ರತಿಗಳು ಒಂದಕ್ಕಿಂತ ಹೆಚ್ಚು ಗುಂಪುಗಳಲ್ಲಿ ಗಣನೆಗೆ ಬರುತ್ತವೆ. ಕವಿಯ ಸ್ವಹಸ್ತಪ್ರತಿ ಏಕೈಕ ಹಸ್ತಪ್ರತಿಯಾಗಿಯೂ, ಸಂರಕ್ಷಿತ ಪ್ರತಿಯಾಗಿಯೂ ಆಗಬಹುದು. ಮಾತೃಕಾ ಪ್ರತಿಯೆಂಬುದು ನಮಗೆ ದೊರೆಯದಿರುವ ಮೂಲವನ್ನೊ, ಕವಿಯ ಸ್ವಹಸ್ತಾಕ್ಷರ ಪ್ರತಿಯನ್ನೊ ಅಥವಾ ದೊರೆತವುಗಳಲ್ಲಿಯೇ ಮೂಲವೆಂದು ಕಂಡುಬಂದುದನ್ನೊ ಹೇಳುವಂತಹ ಮಾತಾಗಿರುವುದರಿಂದ ಇದನ್ನು ಇಲ್ಲಿ ಬಿಡಬಹುದಾಗಿದೆ. ಕಲಬುರ್ಗಿ ಅವರು ಸ್ವಹಸ್ತಾಕ್ಷರ ಪ್ರತಿಯನ್ನೇ ಮೂಲಪ್ರತಿ ಎಂದು ಕರೆದಿದ್ದರೆ, ಇದು ಕೂಡ ಮಾತೃಕಾಪ್ರತಿಯೇ ಆಗುತ್ತದೆ. ಶುದ್ಧ ಸಂತಾನ, ಅಶುದ್ಧ ಸಂತಾನ ಎಂಬ ಪದಗಳೇ ಶುದ್ಧವಾಗಿ ಕಾಣುವುದಿಲ್ಲ. ಅವುಗಳಲ್ಲಿ ಮಾತೃಕಾ, ಸೋದರಾ, ಪುತ್ರಿಕಾ ಮೊದಲಾದವುಗಳನ್ನು ಗುರುತಿಸುವುದು ಅಗತ್ಯವಾಗಿ ಕಾಣುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಕವಿಯ ಸ್ವಹಸ್ತಾಕ್ಷರ ಪ್ರತಿ, ಏಕೈಕ ಹಸ್ತಪ್ರತಿ, ಪರಂಪರಾಗತಪ್ರತಿ, ಮಿಶ್ರಪ್ರತಿ ಮತ್ತು ಸಂರಕ್ಷಿತ ಪ್ರತಿ ಎಂಬ ಐದು ವಿಭಾಗಗಳನ್ನು ಮಾಡಿಕೊಳ್ಳುವುದು ಸಾಧುವಾಗಿ ಕಾಣುತ್ತದೆ.

ಕವಿಗಳು ತಮ್ಮ ಪ್ರತಿಭಾ ಸಾಮರ್ಥ್ಯದಿಂದ ರಚಿಸಿದ ಕಾವ್ಯಗಳನ್ನು ವಿದ್ವತ್ಪೂರ್ಣ ಪಂಡಿತರಿಂದ ನಿರೂಪಗೊಂಡ ಶಾಸ್ತ್ರ ಗ್ರಂಥಗಳನ್ನು ಪ್ರತಿಕಾರರು ಪ್ರತಿಮಾಡಿ ಆ ಗ್ರಂಥ ಸಂಪತ್ತನ್ನು ಕಾಪಾಡಿಕೊಂಡು ಬಂದಿರುವುದು ಪುಣ್ಯ ವಿಶೇಷವೆಂದೇ ಹೇಳಬೇಕು. ಅತ್ತಿಮಬ್ಬೆಯಂತಹ ಶಾಸ್ತ್ರದಾನಿಗಳಿಂದ, ರಾಜರ, ಆಸಕ್ತರ ಗ್ರಂಥಾಭಿರುಚಿಯಿಂದ ಗ್ರಂಥಗಳ ಪ್ರತಿ ಮರುಪ್ರತಿಗಳಾಗಿ ಕೆಲವಾದರೂ ಉತ್ತಮ ಗ್ರಂಥಗಳು ನಮಗೆ ಲಭ್ಯಗಳಾಗಿವೆ. ಇಂತಹ ಸಾಹಿತ್ಯ ಸಂಪತ್ತನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ ಜನತೆಗೆ ದೊರೆಯುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಹಸ್ತಪ್ರತಿ ಸಂರಕ್ಷಣಾ ವಿಧಾನ**

ಹಸ್ತಪ್ರತಿಗಳು ಜ್ಞಾನ ಪ್ರಸಾರ ಮಾಡುವ ಸಾಧನಗಳು. ಇವು ಪ್ರಾಚೀನ ಸಾಹಿತ್ಯ ರಚನೆಗೆ ಅತಿ ಮಹತ್ವದ ಕೊಡುಗೆಗಳಾಗಿವೆ. ಹಸ್ತಪ್ರತಿಗಳು ಇರದಿದ್ದರೆ ಸಾಹಿತ್ಯವು ಅಜ್ಞಾತವಾಗುತ್ತಿತ್ತು. ಹಸ್ತಪ್ರತಿಗಳು ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ಭೌತಿಕ ಮತ್ತು ಸಾಂಸ್ಕೃತಿಕ ಜ್ಞಾನ ಸಂಪತ್ತಾಗಿದೆ. ನಮ್ಮ ಪ್ರಾಚೀನರು ಇಂಥ ಹಸ್ತಪ್ರತಿಗಳನ್ನು ಬಹು ವಿಧಾನಗಳಿಂದ ಸಂರಕ್ಷಿಸುತ್ತಾ ಬಂದಿದ್ದಾರೆ. ಒಂದೊಂದು ಕಟ್ಟುಗಳಲ್ಲಿಯೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರತಿಗಳಿವೆ. ಅವು ವ್ಯವಸ್ಥಿತವಾಗಿ ಇರುವಂತೆ ಮತ್ತು ಕೈಯಿಂದ ಅಥವಾ ಬೇರೆ ಕಾರಣಗಳಿಂದ ಕೆಳಗೆ ಜಾರಿ ಬಿದ್ದರೂ ಪ್ರತಿಗಳ ರಕ್ಷಣೆಗಾಗಿ ರಕ್ಷಾಕವಚಗಳನ್ನು ಅಳವಡಿಸುವುದು, ಧೂಳು-ಕ್ರಿಮಿಕೀಟಗಳು ಆಕ್ರಮಿಸದಂತೆ ಹಾಗೂ ಮಳೆ-ಗಾಳಿಗಳಿಂದ ರಕ್ಷಿಸಲು ಹತ್ತು ಹಲವು ಸುರಕ್ಷತೆಯನ್ನು ಅಳವಡಿಸಿಕೊಂಡಿದ್ದರು. ನಮ್ಮ

ಪ್ರಾಚೀನರಿಗೆ ಹಸ್ತಪ್ರತಿಗಳ ರಚನೆಯ ಹಿಂದಿನ ಅಪಾರ ಶ್ರಮದ ಅಗಾಧ ಅರಿವಿತ್ತು, ಹೀಗಾಗಿಯೇ ಅವುಗಳನ್ನು ಅತ್ಯಂತ ಭಕ್ತಿ–ಭಾವಗಳಿಂದ ಹಾಳಾಗದಂತೆ ರಕ್ಷಿಸುತ್ತಾ ಬಂದಿದ್ದಾರೆ. ಅಂತೆಯೇ ಲಿಪಿಕಾರರು ತಮ್ಮ ಗ್ರಂಥಗಳಲ್ಲಿ ಹೀಗೆ ಭಿನ್ನವಿಸಿಕೊಂಡಿರುವುದು ಕಂಡುಬರುತ್ತದೆ–

***ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ***

***ಅಥವಾ ಪುನರಾಯಾತಂ ಜೀರ್ಣಂ ಭಷ್ಟಾಚ ಖಂಡಶಃ***

***ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇಚ್ಛಿಲ ಬಂದನಾತ್***

***ಮೂರ್ಖ ಹಸ್ತೇ ನದಾತಮ್ಯಾಮೇನಂ ವದತಿ ಪುಸ್ತಕಂ***

ಪುಸ್ತಕ, ವನಿತೆ, ಸಂಪತ್ತು ಈ ಮೂರು ಇತರರ ಕೈಗೆ ಸೇರಿದರೆ ಅವು ಜೀರ್ಣವಾಗಿರುತ್ತವೆ, ಭ್ರಷ್ಟವಾಗಿರುತ್ತವೆ ಇಲ್ಲವೆ ಅರ್ಧಂಬರ್ಧವಾಗಿರುತ್ತವೆ. ಎಣ್ಣೆ, ನೀರು ಸೋಂಕದ ಹಾಗೆ ಪುಸ್ತಕಗಳನ್ನು ರಕ್ಷಿಸಬೇಕು, ಮತ್ತು ಅವುಗಳನ್ನು ಸಡಿಲವಾಗಿ ಕಟ್ಟಬಾರದು, ಮೂರ್ಖರ ಕೈಗೆ ಕೊಡಬಾರದೆಂದು ಈ ಪುಸ್ತಕದಲ್ಲಿ ಹೇಳಲಾಗಿದೆ.

ಹಸ್ತಪ್ರತಿ ಕಟ್ಟುಗಳಲ್ಲಿರುವ ಗರಿಗಳನ್ನು ಅನುಕ್ರಮವಾಗಿ ಜೋಡಿಸಿ ಅದರ ಮೇಲೆ ಮತ್ತು ಕೆಳಗೆ ಅಂದರೆ ಗರಿಗಳ ಎರಡೂ ಬದಿಗಳಲ್ಲಿ ಮರದ ಹಲಗೆಗಳನ್ನು ಇಟ್ಟು ಕಟ್ಟುತ್ತಿದ್ದರು. ಗರಿಗಳು ಅಸ್ತವ್ಯಸ್ತವಾಗದಂತೆ ಅದರ ಅಂಚುಗಳು ಮುರಿಯದಂತೆ ಓಲೆಗರಿಯ ಆಕೃತಿಗೆ ಕೊರೆದು ಆ ಫಳಿಗಳ ನಡುವೆ ಎರಡೂ ಬದಿಗೆ ರಂಧ್ರ ಕೊರೆದು ಅದರ ಮೂಲಕ ದಾರ ಪೋಣಿಸಿ ಕಟ್ಟುಗಳನ್ನು ಬಿಗಿಯಾಗಿ ಕಟ್ಟುತ್ತಿದ್ದರು. ದಾರ ಜಗ್ಗುವಿಕೆಯಿಂದ ಗರಿಗೆ ಪೆಟ್ಟು ತಾಗಿ ರಂಧ್ರಗಳು ದಿನದಿಂದ ದಿನಕ್ಕೆ ದೊಡ್ಡದಾಗಬಾರದೆಂಬ ಕಾರಣಕ್ಕಾಗಿ ಬೆಳ್ಳಿಯ ಉಂಗುರ ಮಾಡಿಸಿ ಹಾಕಿರುವ ಪ್ರತಿಗಳು ಸಿಕ್ಕಿವೆ. ಇಂಥ ಪ್ರತಿಗಳು ವಿರಳವೆಂದೆ ಹೇಳಬಹುದು. ರಕ್ಷಾಕವಚವುಳ್ಳ ಕೆಲವು ಹಸ್ತಪ್ರತಿಗಳನ್ನು ಕೆಂಪು, ಹಳದಿ ಅಥವಾ ರೇಷ್ಮೆ ಅರಿವೆಯಿಂದ ಸುತ್ತಿರುತ್ತಾರೆ. ಕಾರಣ ಈ ಕೆಂಪು–ಹಳದಿ ಬಣ್ಣಗಳಿಗೆ ಕ್ರಿಮಿ – ಕೀಟಗಳು ಹತ್ತಿರವೂ ಸುಳಿಯಲಾರದೆಂಬ ನಂಬಿಕೆ. ಹೀಗಾಗಿಯೇ ಇವತ್ತಿಗೂ ಕೆಲವು ಮಠ–ಮಾನ್ಯಗಳ ಹಸ್ತಪ್ರತಿ ಭಂಡಾರಗಳಲ್ಲಿ ಹಳದಿ–ಕೆಂಪು ಬಣ್ಣಗಳ ಅರಿವೆಗಳಿಂದ ಸುತ್ತಿರುತ್ತಾರೆ.

**ಸಂದೂಕ(ಪೆಟ್ಟಿಗೆ)**

ಹಸ್ತಪ್ರತಿಗಳನ್ನು ಸಂರಕ್ಷಿಸುವ ವಿಧಾನಗಳಲ್ಲಿ ಸಂದೂಕ ಕೂಡ ಒಂದಾಗಿದೆ. ಬಂಗಾರದಂತ ದ್ರವ್ಯಗಳಂತೆ ಹಸ್ರಪ್ರತಿಗಳನ್ನು ಸಂಪತ್ತು ಎಂದೇ ಭಾವಿಸಿ ಅವುಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸುರಕ್ಷಿತವಾಗಿ ಸಾಗುವಂತೆ ನೋಡಿಕೊಳ್ಳುತ್ತಿದ್ದರು. ಆ ಮೂಲಕ ಹಸ್ತಪ್ರತಿಗಳನ್ನು ಉಳಿಸುವ ದೂರದೃಷ್ಟಿ ನಮ್ಮ ಪ್ರಾಚೀನರಿಗೆ ಇದ್ದಂತೆ ತೋರುತ್ತದೆ. ಹೀಗಾಗಿಯೇ ಮಕ್ಕಳಾದಿಯಾಗಿ ಅರಿಯದವರ ಕೈಗಳಿಂದ, ಕ್ರಿಮಿಕೀಟಗಳಿಂದ ರಕ್ಷಿಸಲು ತಮ್ಮದೇ ಅನುಭವದ ನೆಲೆಯಲ್ಲಿ ಹಲವು ಕ್ರಮಗಳನ್ನು ಕೈಗೊಂಡಿದ್ದರು. ಇದಕ್ಕಾಗಿ ದುಬಾರಿ ವೆಚ್ಚ ಮತ್ತು ಶ್ರಮವಾದರೂ ಹಿಂಜರಿಯುತ್ತಿರಲಿಲ್ಲ ಎಂಬುದಕ್ಕೆ ಈ ಸಂದೂಕುಗಳೇ ನಿದರ್ಶನ. ಇವುಗಳಲ್ಲಿ ಹಸ್ತಪ್ರತಿಗಳನ್ನು ಇಡುವ ಮುನ್ನ ಸಂದೂಕಿನಲ್ಲಿ ತಂಬಾಕು ಪುಡಿ, ಕರ್ಪೂರ, ಗಂಧಗಳನ್ನು ಇಡುತ್ತಿದ್ದರು. ಇನ್ನೂ ಕೆಲವು ಕಡೆಗಳಲ್ಲಿ ಒಂದೊಂದೆ ಹಸ್ತಪ್ರತಿಗಳನ್ನಿಡುವ ಸಣ್ಣ ಗಾತ್ರದ ಮರದ ಪೆಟಾರಿಗಳು ದೊರಕಿವೆ.

**ಹೊಗೆಗೂಡು**

ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಹೊಗೆಗೂಡುಗಳ ಪಾತ್ರ ಮಹತ್ವದ್ದು. ಬೆತ್ತದ ಬುಟ್ಟಿಗಳನ್ನು ತಯಾರಿಸಿ ಅದರಲ್ಲಿ ಹಸ್ತಪ್ರತಿಗಳನ್ನು ಇಟ್ಟು ಅಡಿಗೆ ಮನೆಯ ನೇರಕ್ಕೆ ಇಲ್ಲ ಸ್ವಲ್ಪ ಆಚೆಚೆ ಮೇಲಕ್ಕೆ ಎತ್ತರದಲ್ಲಿ ನೇತಾಕಿ ಕಟ್ಟುತ್ತಿದ್ದರು. ಇಂಥ ವ್ಯವಸ್ಥೆ ಮಲೆನಾಡ ಕರಾವಳಿ ಪ್ರದೇಶಗಳಲ್ಲಿ ಬಳಕೆಯಲ್ಲಿತ್ತು. ಈ ವ್ಯವಸ್ಥೆಯಲ್ಲಿ ಒಲೆಯ ಹೊಗೆಯು ನೇರವಾಗಿ

ಬುಟ್ಟಿಗಳಿಗೆ ತಾಗುತ್ತಿತ್ತು. ಇದರಿಂದ ಹಸ್ತಪ್ರತಿಗಳು ಕ್ರಿಮಿ–ಕೀಟಗಳಿಂದ ಸುರಕ್ಷಿತವಾಗಿರುತ್ತಿದ್ದವು. ಹೊಗೆಯಿಂದ ಕಪ್ಪಾಗಿರುತ್ತಿದ್ದ ಈ ಬುಟ್ಟಿಗಳನ್ನು ವರ್ಷಕ್ಕೊಮ್ಮೆ ಇಲ್ಲವೇ ಎರಡು ವರ್ಷಕ್ಕೊಮ್ಮೆಯಾದರೂ ಕೆಳಗೆ ಇಳಿಸಿ ಸ್ವಚ್ಛಮಾಡಿ ಪುನಃ ಅದೇ ಜಾಗದಲ್ಲಿ ಇರಿಸುತ್ತಿದ್ದರು.

ಕರ್ನಾಟಕದಲ್ಲಿ ಸುಮಾರು 1000 ವರ್ಷಗಳಷ್ಟು ಹಳೆಯದಾದದ ಹಸ್ತಪ್ರತಿಗಳು ಬೇರೆ–ಬೇರೆ ಪ್ರದೇಶಗಳಲ್ಲಿ ಹರಡಿಕೊಂಡಿವೆ. ಇವುಗಳನ್ನು ಅರಕ್ಷಿತ ಹಸ್ರಪ್ರತಿಗಳು ಮತ್ತು ಸಂಗ್ರಹಿತ ಹಸ್ತಪ್ರತಿಗಳೆಂದು ವರ್ಗೀಕರಿಸಬಹುದು. ಯಾವುದಾದರೂ ಮನೆ, ಮಠ–ದೇವಾಲಯಗಳಲ್ಲಿ ಬಹುಕಾಲದಿಂದಲೂ ಬಿಡಿಬಿಡಿ ರೂಪದಲ್ಲಿ ಬಿದ್ದುಕೊಂಡಿರುವ ಹಸ್ತಪ್ರತಿಗಳನ್ನು ಅರಕ್ಷಿತ ಹಸ್ತಪ್ರತಿಗಳೆಂದು ಕರೆಯುತ್ತಾರೆ. ವಾಚನ, ಪ್ರವಚನ, ಅಧ್ಯಯನ ಪ್ರಯೋಜನಾರ್ಥ ಮಠ, ದೇವಾಲಯ, ಅರಮನೆಗಳಂತಹ ಪ್ರಾಚೀನ ಸಂಸ್ಥೆಗಳಲ್ಲಿ ಶೇಖರಿಸಲ್ಪಟ್ಟಂತಹ ಹಸ್ತಪ್ರತಿಗಳು ಸಂಗ್ರಹಿತ ಹಸ್ತಪ್ರತಿಗಳೆಂದು ಕರೆಯುತ್ತಾರೆ. ಹಸ್ತಪ್ರತಿ ಭಂಡಾರಗಳ ಆಗೊಮ್ಮೆ ಈಗೊಮ್ಮೆ ಸೂಚಿಗ್ರಂಥಗಳನ್ನು ಪ್ರಕಟಿಸುತ್ತವೆ. ವೀರಶೈವ ಮಠಗಳು, ಸಾರ್ವಜನಿಕ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು ಹೊಸ ಉತ್ಸಾಹದಿಂದ ಹಸ್ತಪ್ರತಿಗಳನ್ನು ರಕ್ಷಿಸುವ ಕಾರ್ಯವನ್ನು ಮಾಡಬೇಕಾಗಿದೆ.

ಹಸ್ತಪ್ರತಿ ಸಣ್ಣದಿರಲಿ ದೊಡ್ಡದಿರಲಿ, ಉಪಯುಕ್ತವಿರಲಿ, ನಿರುಪಯುಕ್ತವಿರಲಿ ಅಲಕ್ಷಿಸದೇ ಅವುಗಳೆಲ್ಲವನ್ನು ರಕ್ಷಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಕರ್ನಾಟಕದಲ್ಲಿ ಹಸ್ತಪ್ರತಿಗಳು ಹಾಳಾದದ್ದು ವಿರಳ. ಉಳಿದು ಬಂದದ್ದೇ ಹೇರಳ. ನಮ್ಮ ಪಾಚೀನರು ನಮಗೆ ನೀಡಿದ ಇಂಥ ಶ್ರೀಮಂತ ಹಸ್ತಪ್ರತಿ ಸಂಪತ್ತನ್ನು ಕಾಪಾಡುವ ಕಾರ್ಯವನ್ನು ಎಲ್ಲ ವಿಶ್ವವಿದ್ಯಾಲಯಗಳು, ಸರ್ಕಾರಿ ಸಂಸ್ಥೆಗಳು, ಹಸ್ತಪ್ರತಿ ಭಂಡಾರಗಳು ಮಾಡಬೇಕಾಗಿದೆ. ಅದೇ ರೀತಿ ಹಸ್ತಪ್ರತಿಗಳನ್ನು ಸ್ಕ್ಯಾನರ್ ಯಂತ್ರದ ಮೂಲಕ ಸ್ಕ್ಯಾನ್ ಮಾಡುವುದು. ಅಥವಾ ಡಿಜಿಟಲ್ ಕ್ಯಾಮರ ಮೂಲಕ ಸೆರೆ ಹಿಡಿಯುವುದು, ಮೈಕ್ರೋಫೋನ್ ಮುಖಾಂತರ ಓದಿ ರೆಕಾರ್ಡ್ ಮಾಡುವುದು, ಡಿ.ಟಿ.ಪಿ ಮಾಡುವುದರ ಮೂಲಕ ಕಾಪಾಡಿಕೊಂಡು ಬರಬಹುದಾಗಿದೆ.

ಒಟ್ಟಿನಲ್ಲಿ ಹಸ್ತಪ್ರತಿಗಳು ನಾಡಿನ ಸಂಸ್ಕೃತಿಯ ಭಂಡಾರಗಳು. ಸಾಹಿತ್ಯ ಸಂಸ್ಕೃತಿಯ ಸೃಷ್ಟಿಶೀಲ ಉತ್ಪನ್ನಗಳು. ಕನ್ನಡ ನಾಡಿನ ಜನ ಬದುಕಿನ ಪ್ರತೀಕಗಳಾದ ಹಸ್ತಪ್ರತಿಗಳ ಅಧ್ಯಯನವು ಕನ್ನಡ ಪರಂಪರೆ, ಕನ್ನಡ ಮನಸ್ಸು ಮತ್ತು ಕನ್ನಡ ಸಂಸ್ಕೃತಿಯ ಅಧ್ಯಯನದ ಗುರುತುಗಳಾಗಿವೆ.

**ಪರಾಮರ್ಶನ ಗ್ರಂಥಗಳು**


- ಹಿರೇಮಠ, ಬಿ. ಕೆ. (1992). *ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ.* ವೀರಶೈವ ಅಧ್ಯಯನ ವೇದಿಕೆ
- ಕಲಬುರ್ಗಿ, ಎಂ. ಎಂ. (1993). *ಕನ್ನಡ ಹಸ್ತಪ್ರತಿಶಾಸ್ತ್ರ.* ಸ್ನೇಹ ಪ್ರಕಾಶನ
- ಸಣ್ಣಯ್ಯ, ಬಿ. ಎಸ್. (1992). *ಹಸ್ತಪ್ರತಿಶಾಸ್ತ್ರ ಪರಿಚಯ.* ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.
- ಸಣ್ಣಯ್ಯ, ಬಿ. ಎಸ್. *ಹಸ್ತಪ್ರತಿ ಸಂರಕ್ಷಣೆಯ ವಿಧಾನಗಳು.*